# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತ ಕಛೇರಿ ವಿಳಾಸ ನಂ 29
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆಯ ಕಛೇರಿ
ವಿಜಯನಗರ 2 ನೇಹಂತ ಮೈಸೂರು-570017

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಸರಗೂರು
Ph 08228 – 265678

ನಿಗಮ ಇ-ಮೇಲ್ : WWW.CESCMYSORE.ORG
email aeecescsarguru @gmail.com


ಸಂಖ್ಯೆ:ಸಕಾನಿಇಂ(ವಿ)/ಸರಗೂರು/ಸಇಂ(ತಾ)/2019-20/863 ದಿನಾಂಕ: 4.11.19

ದಿನಾಂಕ 11.10.2019 ರಂದು ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶ್ರೀ ಎ ಎ ಸುನಿಲ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದ ಸರಗೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಶ್ರೀಧರ್ ಎಸ್. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ., ಸರಗೂರು
2. ಶ್ರೀ ವೆಂಕಟೇಶ್.ಎಸ್ ಸಹಾಯಕ ಇಂಜಿನಿಯರ್(ತಾ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ.. ಸರಗೂರು
3. ಶ್ರೀ ಅಶೋಕ ಜಿ ಬಿ ಸಹಾಯಕ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಚಾವಿಸನಿನಿ.. ಸರಗೂರು
4. ಶ್ರೀ ದೀಪಕ್ ಡಿ ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಚಾವಿಸನಿನಿ.. ಬಿ.ಮಟಕೆರೆ
5. ಶ್ರೀ ಪ್ರಕಾಶ ಪಾಟೀಲ್ ಕಿರಿಯ ಇಂಜಿನಿಯರ್(ಪ್ರ) ಶಾಖಾಧಿಕಾರಿಗಳು. ಅಂತರಸಂತೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಸರಗೂರು ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.ತದನಂತರದಲ್ಲಿ ಈ ಹಿಂದೆ ದಿನಾಂಕ 11.06.2019 ರಂದು ನಡೆದ ಸಭೆಯಲ್ಲಿ ಸ್ವೀಕೃತವಾದ 05 ಅರ್ಜಿಗಳಲ್ಲಿ 05 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದವರಿಗೆ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು

| ಕ್ರ. ಸಂ | ಅಹವಾಲುದಾರರ ಹೆಸರು ಮತ್ತು ವಿಳಾಸ | ಸಮಸ್ಯೆಗಳ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1. | ಮಹೇಶ್ ಹೆಚ್.ಆರ್<br>ಸುಣ್ಣಲ್‌ಮುಂಟಿ<br>9902643155 | 1. ಸುಣ್ಣಲ್‌ಮುಂಟಿ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ನೀಡದಿರುವ ಬಗ್ಗೆ<br>2.ಐ.ಪಿ ಸೆಟ್‌ಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿರುವ ಬಗ್ಗೆ | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ವಿಷಯದ ಬಗ್ಗೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ತುರ್ತಾಗಿ ಚಾಲನೆ ಮಾಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಸೂಚಿಸಿರುತ್ತಾರೆ. |

Scanned by CamScanner

| | | | |
|---|---|---|---|
| | (ವಾಟರ್‌ಮ್ಯಾನ್) ನೇರಳೆ ಹುಂಡಿ 8748031048 | ನಿರಂತರ ವಿದ್ಯುತ್ ಸಂಪರ್ಕ ಮಾಡುವ ಬಗ್ಗೆ. | ವಿಷಯದ ಬಗ್ಗೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ತುರ್ತಾಗಿ ಚಾಲನೆ ಮಾಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಸೂಚಿಸಿರುತ್ತಾರೆ. |
| 3. | ಸ್ವಾಮಿ ಹೊಸಕೆರೆ ಸುಂಡ 8970149967 | 1. ಹೊಸಕೆರೆ ಸುಂಡ ಗ್ರಾಮದಲ್ಲಿ 2 ಮನೆಗಳಿಗೆ (ತೋಟದ ಮನೆ) ವಿದ್ಯುತ್‌ಚ್ಛಕ್ತಿ ಇಲ್ಲದಿರುವಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. |
| 4. | ಪುಟ್ಟಸ್ವಾಮಿ (ಗ್ರಾ.ಪಂ ಸದಸ್ಯರು) ಸೂಗಹಳ್ಳಿ 9164637980 | 1. ಸೋಗಹಳ್ಳಿ ಗ್ರಾಮದ ಕೆಲವು ಮನೆಗಳಿಗೆ ವಿದ್ಯುತ್‌ಚ್ಛಕ್ತಿ ಇಲ್ಲದಿರುವ ಬಗ್ಗೆ ಹಾಗೂ ಹಾಲಿ ಸಂಪರ್ಕ ಹೊಂದಿರುವ ಮನೆಗಳಿಗೆ ಸರ್ವೀಸ್ ಮೇನ್ ವಯರ್‌ಗಳು ದೂರವಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ |
| 5 | ಸೋಮೇಗೌಡ ಸರಸ್ವತಿಪುರ 8971129494 | 1. ನಿರಂತರ ಜ್ಯೋತಿ ವಿದ್ಯುತ್ ನೀಡಿ ಪುನ: ತೆಗಿದಿರುತ್ತಾರೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ನಿರಂತರ ಜ್ಯೋತಿ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ತುರ್ತಾಗಿ ಚಾಲನೆ ಮಾಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಸೂಚಿಸಿರುತ್ತಾರೆ. |
| 6 | ಶಿವಲಿಂಗಯ್ಯ( ಗ್ರಾಂ.ಪಂ ಸದಸ್ಯರು) ಯಶವಂತಪುರ 9743518449 | 1.ಯತ್ತಿಗೆ ಗ್ರಾಮಕ್ಕೆ ವಿದ್ಯುತ್ ಕಂಬಗಳ ಅವಶ್ಯಕತೆ ಇರುವ ಬಗ್ಗೆ.<br>2.ನಿರಂತರ ಜ್ಯೋತಿ ವಿದ್ಯುತ್ ನೀಡದಿರುವ ಬಗ್ಗೆ.<br>3.ಸೌಭಾಗ್ಯ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡದಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಯತ್ತಿಗೆ ಗ್ರಾಮದ ಕಂಬದ ಕೆಲಸಗಳಿಗೆ ಆಗಿದ್ದು ಹಾಗೂ ನಿರಂತರ ಜ್ಯೋತಿ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ತುರ್ತಾಗಿ ಚಾಲನೆ ಮಾಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಸೂಚಿಸಿರುತ್ತಾರೆ.ಹಾಗೂ ಸೌಭಾಗ್ಯ ಯೋಜನೆಯ ವಿಳಂಬದ ಬಗ್ಗೆ ಗ್ರಾಹಕರಿಗೆ ವಿವರಣೆ ನೀಡಿರುತ್ತಾರೆ. |
| 7 | ಮಹದೇವಪ್ಪ ನಂಜೀಪುರ 9008193238 | 1.ನಂಜೀಪುರ ಗ್ರಾಮದ ಜಮೀನಿನಲ್ಲ ಟಿ.ಸಿ ಅಳವಡಿಸಿದ್ದು, ಗೃಹ ನಿರ್ಮಾಣ ಮಾಡಲು ತೊಂದರೆಯಾಗಿದೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ |
| 8. | ಜಯಣ್ಣ ದಡದಹಳ್ಳಿ 9964851223 | ದಡದಹಳ್ಳಿ ಹೊಸಬಡಾವಣೆಗೆ ಕಂಬ ಬೇಕಾಗಿರುವ ಬಗ್ಗೆ. ಹಾಗೂ ಎಲ್.ಟಿ ವಯರ್‌ಗಳು ಜೋತು ಬಿದ್ದಿರುತ್ತವೆ(ಜಾತ್ರೆ ಮಾಳದ ಹತ್ತಿರ) | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ |
| 9 | ತಮ್ಮೇಗೌಡ ನೇರಳೆ (ಸುಣ್ಣಕಲ್ಲುಮುಂಟಿ) 9902303456 | ಸುಣ್ಣಕಲ್ಲುಮುಂಟಿ ಗ್ರಾಮ ಜಮೀನಿನಲ್ಲಿ ವೈರು ಜೋತು ಬಿದ್ದುರುತ್ತದೆ.<br>2.ಸುಣ್ಣಕಲ್ಲುಮುಂಟಿ ಗ್ರಾಮದಲ್ಲಿ ರಾತ್ರಿವೇಳೆಯಲ್ಲಿ ವಿದ್ಯುತ್ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ |

Scanned by CamScanner

| | | | |
|---|---|---|---|
| | | ಐ.ಪಿ ಮಾರ್ಗ) | |
| 10 | ರವಿ<br>ಬಿಡುಗಲು | 1.ಬಿಡುಗಲು ಗ್ರಾಮದಲ್ಲಿ ವಿದ್ಯುತ್ ಕಂಬ ಮುಂದಿದ್ದು. ಐಪಿ ಸೆಟ್‌ಗೆ ವಿದ್ಯುತ್ ಸರಬರಾಜು ಮಾಡದಿರುವುದು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ. ಹಾಗೂ ಸರ್ವಿಸ್ ಮೇನ್ ವೈರ್‌ನಲ್ಲಿ ತಾತ್ಕಾಲಿಕ ವಿದ್ಯುತ್ ವ್ಯವಸ್ಥೆ ಮಾಡಲು ಸೂಚಿಸಿಯುತ್ತಾರೆ. |
| 11 | ಮಹಾಲಿಂಗ<br>ಮುಳ್ಳೂರು<br>9449354538 | 1.ಮರಗಳ ಕೆಳಗೆ ನಿರಂತರ ಜ್ಯೋತಿ ಮಾರ್ಗ ಹಾದುಹೋಗಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅರಣ್ಯ ಇಲಾಖೆಯ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ಸೂಚಿಸಿರುತ್ತಾರೆ. |
| 12 | ಪ್ರಕಾಶ್(ಗ್ರಾ.ಪಂ ಸದಸ್ಯರು)<br>ಹಾದನೂರು<br>9980752334 | 1.ಹಾದನೂರು ಗ್ರಾಮದಲ್ಲಿ ಕೇಬಲ್ ಹಾಗೂ ವಯರ್‌ಗಳನ್ನು ಅಳವಡಿಸಿರುತ್ತಾರೆ. ರೋಡ್ ಕ್ರೋಸಿಂಗ್ ನಲ್ಲಿ ಕೇಬಲ್ ಅಳವಡಿಸಿರುವ ಬಗ್ಗೆ.<br>2.ಸರ್ಕಾರದ ಸೌಲಭ್ಯಗಳು ಇನ್ನು ದೊರಕದಿರುವ ಬಗ್ಗೆ.<br>3.ನಿರಂತರ ಜ್ಯೋತಿ ಮಾರ್ಗ ಚಾಲನೆಗೊಳಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಾದನೂರು ಗ್ರಾಮದಲ್ಲಿ ಬೆಳಕು ಯೋಜನೆಯಲ್ಲಿ ನಡೆದಿರುವ ಕಾರ್ಯಗಳ ಬಗ್ಗೆ ಪರಿಶೀಲಿಸಲು ಹಾಗೂ ನಿರಂತರ ಜ್ಯೋತಿ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ತುರ್ತಾಗಿ ಚಾಲನೆ ಮಾಡಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)ರವರಿಗೆ ಸೂಚಿಸಿರುತ್ತಾರೆ |
| 13 | ದಾಸೇಗೌಡ<br>ಕನ್ನಡಪ್ರಭ ವರದಿಗಾರರು<br>ಸಂಗೂರು | 1.ಮನೆಗಳಿಗೆ ಮೀಟರ್ ಬೋರ್ಡ್ ಅಳವಡಿಸದಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಐಪಿಡಿಎಸ್ ಯೋಜನೆಯಡಿ ಬಿಟ್ಟುಹೋಗಿರುವ ಮನೆಗಳಿಗೆ ಮೀಟರ್ ಬೋರ್ಡ್ ಬದಲಾವಣೆ ಮಾಡಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ವಿದ್ಯುತ್ ಗ್ರಾಹಕರಿಂದ ಕೇಳಿಬಂದಂತಹ ದೂರುಗಳು ಹಾಗೂ ಕುಂದುಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

Venkatesh

for ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಸಂಗೂರು.

Scanned by CamScanner